## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಸರ್ಕಾರದ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಿತವ್ಯಯ ಕ್ರಮಗಳನ್ನು ಸಡಿಲಗೊಳಿಸುವ ಬಗ್ಗೆ.

**ಓದಲಾಗಿದೆ :** 1) ಸರ್ಕಾರದ ಆದೇಶ ಸಂಖ್ಯೆ : ಆಇ 2 ಟಿಎಫ್‌ಪಿ 2004, ದಿನಾಂಕ : 17–1–2004
2) ಸರ್ಕಾರದ ಆದೇಶ ಸಂಖ್ಯೆ : ಆಇ 2 ಬಿಇಎಂ 2003, ದಿನಾಂಕ : 5–7–2004
3) ಸರ್ಕಾರದ ಆದೇಶ ಸಂಖ್ಯೆ : ಆಇ 1 ಬಿಇಎಂ 2005, ದಿನಾಂಕ : 21–6–2005

**ಪ್ರಸ್ತಾವನೆ :**

ಮೇಲೆ (1) ರಲ್ಲಿ ಓದಲಾದ ದಿನಾಂಕ 17–1–2004ರ ಆದೇಶದಲ್ಲಿ / ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯನ್ನು ಹೊರತುಪಡಿಸಿದಂತೆ ಸರ್ಕಾರದ ಅನುದಾನಿತ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಅನುದಾನಿತ ಹುದ್ದೆಗಳಿಗೆ ಬೋಧಕ ಸಿಬ್ಬಂದಿಯ ನೇಮಕಾತಿಯನ್ನು ಅನುಮೋದಿಸುವ ಅಧಿಕಾರಕ್ಕೆ ಸಂಬಂಧಿಸಿದಂತೆ ವಿವಿಧ ಆದೇಶಗಳಲ್ಲಿ ಪ್ರತ್ಯಾಯೋಜಿಸಿದ್ದ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಗಿದೆ.

ಹುದ್ದೆಗಳ ಸೃಜನೆ ಮತ್ತು ನೇರನೇಮಕಾತಿಯ ಮೂಲಕ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಇರುವ ನಿರ್ಬಂಧವನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ : 5–7–2004ರ ಆದೇಶದಲ್ಲಿ ಮುಂದುವರೆಸಲಾಗಿದೆ. ಈ ನಿರ್ಬಂಧವು ಅನುದಾನಿತ ಸಂಸ್ಥೆಗಳಲ್ಲಿನ ನೇಮಕಾತಿ / ಸೃಜನೆ ಮತ್ತು ಹುದ್ದೆಗಳ ಭರ್ತಿಗೆ ಅನ್ವಯಿಸುತ್ತದೆ ಮತ್ತು ಸದರಿ ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಅಥವಾ ಖಾಲಿಯಾಗುವ ಹುದ್ದೆಗಳನ್ನು ಮುಂದಿನ ಆದೇಶದವರೆಗೆ ಯಾವುದೇ ವಿನಾಯಿತಿ ಇಲ್ಲದೇ ಖಾಲಿಯಾಗಿಯೇ ಇಡಬೇಕೆಂದು ಸದರಿ ಆದೇಶದಲ್ಲಿ ಸೂಚಿಸಲಾಗಿದೆ.

ಇತ್ತೀಚೆಗೆ ಮೇಲೆ (3)ರಲ್ಲಿ ಓದಲಾದ ದಿನಾಂಕ : 21–6–2005ರ ಆದೇಶದಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಬಡ್ತಿ ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಇರುವ ಆರ್ಥಿಕ ಮಿತವ್ಯಯ ಕ್ರಮಗಳಿಂದ ಕೆಲವು ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಲಾಗಿದೆ. ಸದರಿ ವಿನಾಯಿತಿಯನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಬಡ್ತಿ ಹುದ್ದೆಗಳನ್ನು ತುಂಬುವುದಕ್ಕೆ ವಿಸ್ತರಿಸಲು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :

**ಸರ್ಕಾರಿ ಆದೇಶ ಸಂಖ್ಯೆ : ಆಇ 10 ಟಿಎಫ್‌ಪಿ 2005**
**ಬೆಂಗಳೂರು, ದಿನಾಂಕ 23ನೇ ಜುಲೈ 2005**

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ ಮತ್ತು ಬೋಧಕೇತರ ಬಡ್ತಿ ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಮಿತವ್ಯಯ ಕ್ರಮಗಳಿಂದ ವಿನಾಯಿತಿ ನೀಡಲು ಸರ್ಕಾರವು ಹರ್ಷಿಸುತ್ತದೆ.

ಅ) ರಾಜೀನಾಮೆ, ನಿವೃತ್ತಿ, ಬಡ್ತಿ ಮತ್ತು ಮರಣದ ಕಾರಣಗಳಿಂದ ಖಾಲಿಯಾದ ಹುದ್ದೆಗಳನ್ನು ಮಾತ್ರ ಬಡ್ತಿಯಿಂದ ತುಂಬತಕ್ಕದ್ದು.

ಆ) ಇಂತಹ ಬಡ್ತಿಗಳನ್ನು ನೀಡುವ ಮುಂಚೆ ಶಿಕ್ಷಣ ಸಂಸ್ಥೆಗಳು ಸರದಿ ಪಟ್ಟಿ (roster system) ಮತ್ತು ಇನ್ನಿತರ ಯಾವುದೇ ಜಾರಿಯಲ್ಲಿರುವ ಸ್ಥಾಯೀ ಆದೇಶಗಳನ್ನು ತಪ್ಪದೇ ಪಾಲಿಸಬೇಕು.

ಇ) ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಯಾವುದೇ ಇತರೆ ನಿಬಂಧನೆಗಳ ಪಾಲನೆಗೆ ಒಳಪಟ್ಟು. ಹುದ್ದೆಗಳನ್ನು ಬಡ್ತಿಯಿಂದ ತುಂಬುವುದಕ್ಕೆ ಸಂಬಂಧಿಸಿದಂತೆ ಮಾತ್ರ ಆದೇಶ ಸಂಖ್ಯೆ ಎಫ್‌ಡಿ 2 ಟಿಎಫ್‌ಪಿ 2004 ದಿನಾಂಕ : 17–1–2004ರಲ್ಲಿ ಹಿಂತೆಗೆದುಕೊಂಡ ಅಧಿಕಾರದ ಪ್ರಸ್ತಾವನೆಯನ್ನು ಸಡಿಲಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ
ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ